
## ತೀರದ ಬೆಳಕಿನಂತೆ ಕವಿತೆ

'ಸೃಜನಶೀಲತೆ ನಮ್ಮೊಳಗೆ ಒಂದು ಕಡುಬಯಕೆಯನ್ನು ಹುಟ್ಟಿಸುತ್ತದೆ; ಕೆಲವೊಮ್ಮೆ ಚಡಪಡಿಕೆಯನ್ನು. ಯಾವಾಗಲೂ ಮುಂದಿನ ಕವನವೋ, ಕತೆಯೋ ನಮ್ಮನ್ನು ಕರೆಯುತ್ತಲಿರುತ್ತದೆ, ಅರಿವಿಗೆ ಬರುವಷ್ಟು ತೀವ್ರತೆಯಲ್ಲಿ, ಆದರೆ, ಕೈಗೆಟುಕದ ದೂರದಲ್ಲಿಯೇ. ಈ ಗ್ರಹಿಕೆಯೇ ಒಂದು ಬಗೆಯಲ್ಲಿ ಕಾಡುತ್ತದೆ – ಅದಾವುದೋ ಒಂದು ಪ್ರತಿಮೆಯಾಗಿ, ದನಿಯಾಗಿ, ನುಡಿಯಾಗಿ, ಕಡು ಸಂಕಟವಾಗಿ. ಮುಂದಿರುವ ಕವನ ತೀರದ ಬೆಳಕಿನಂತೆ, ಆದರೆ ಹತ್ತಿರ ಹತ್ತಿರಕ್ಕೆ ಈಜಿದಂತೆಲ್ಲ ಕವನ ದೂರದೂರವಾಗುತ್ತಲೇ ಇರುತ್ತದೆ.'

—ಲೂಯಿಸ್ ಗ್ಲುಕ್




'ಬರೆಯುವುದೆಂದರೆ ಪರಿಸ್ಥಿತಿಯ – ದುರ್ವಿಧಿ, ಹಾನಿ, ನೋವು – ವಿರುದ್ಧ ಸೇಡು ತೀರಿಸಿಕೊಂಡಂತೆ. ಇವುಗಳನ್ನು ಅನುಭವಿಸಿದವರು, ತನ್ಮೂಲಕ ಏನನ್ನಾದರೂ ಸೃಜಿಸಿದರೆ, ಪರಿಸ್ಥಿತಿಯೆದುರು ಗೆದ್ದಂತೆ' ಎನ್ನುವ ಲೂಯಿಸ್ ಗ್ಲುಕ್ ಅವರ ಮುಕ್ತಛಂದದ ಕವನಗಳು ಬಾಲ್ಯ, ಪ್ರೇಮ, ಕಾಮ, ಸಾವು, ನೋವು, ಸಂಕಟಗಳ ತುಡಿತಗಳನ್ನು ಕುಟುಂಬ, ನಿಸರ್ಗ, ಜೀವಜಾಲಗಳ ಹಿನ್ನೆಲೆಯಲ್ಲಿ, ಬಗೆಬಗೆಯ ಅಸ್ಮಿತೆಗಳ, ಬಹುತ್ವದ ಸಮುದಾಯ ಪ್ರಜ್ಞೆಯಲ್ಲಿ, ಪೌರಾಣಿಕ, ಆದಿಮ ಪಾತ್ರಗಳ–ಚಿತ್ರಗಳ ಸಾಂಕೇತಿಕತೆಯ ಮೂಸೆಯಲ್ಲಿ ಇಟ್ಟು ಜೀವನದ ಏಳುಬೀಳು, ನೋವುನಲಿವು, ತಿರುವುಮುರುವುಗಳೊಡನೆ ಸಂವಾದಿಯಾಗಬಯಸುತ್ತವೆ. ಮೂಲತಃ ಆಂತರ್ಯದಲ್ಲಿ ತಣ್ಣಗೆ ಕೊರೆವ ವಿಷಾದದ ಛಾಯೆ ಹೊಂದಿರುವ ಗ್ಲುಕ್ ಅವರ ಕಾವ್ಯದ ಮಿತಭಾಷಿ ಲಯ, ಸಂತುಲಿತ ಬಂಧ, ಚೊಕ್ಕ ಸಾಚಾ ಭಾವನೆಗಳು ಈ ಕರಾಳತೆಯಾಚೆಯ ಗಂಭೀರ ಸೌಂದರ್ಯದತ್ತ ಓದುಗರನ್ನು ನಿರ್ದೇಶಿಸುತ್ತವೆ. ತಮ್ಮ ಶುರುವಾತಿನ ಪದ್ಯಗಳಲ್ಲಿ ಪ್ರೇಮ, ಸಂಬಂಧ, ಕುಟುಂಬಗಳ ಸ್ತರಗಳಲ್ಲಿ ವಿಫಲತೆಯ ಶೋಧನೆಯಲ್ಲಿ ತೊಡಗಿದ್ದ ಗ್ಲುಕ್, ಮಾಗುತ್ತ ಬಂದ ಹಾಗೆ ವಿಶಾಲ ಭಿತ್ತಿಯುಳ್ಳ ವಿಷಯಗಳತ್ತ ಹೊರಳಿಕೊಂಡು ಅಸ್ಮಿತೆಯ ಸಂದಿಗ್ಧಗಳನ್ನು, ದೈನಂದಿನ ವಾಸ್ತವಗಳ ಒಳಾರ್ಥಗಳನ್ನು ಪರಿಶೀಲನೆಗೆ ಹಚ್ಚುವ, ಅರ್ಥಸಂಪನ್ನ ಕಾವ್ಯಸೃಷ್ಟಿಗೆ ಹೆಸರುವಾಸಿಯಾಗಿದ್ದಾರೆ.

'ಶೋಕಾಚರಣೆಯ ಸ್ವಪ್ನ' ಎಂಬ ಕವನದಲ್ಲಿ ಅನುಭವದ ಆಳಕ್ಕಿಳಿವ ಹಟ, ಹೇಗೆ ತೀರಾ ಖಾಸಗಿ ಆದುದನ್ನು ಎತ್ತಿ ಸಾರ್ವತ್ರಿಕ ಸಂಕಟದ ಅಭಿವ್ಯಕ್ತಿಗೆ ಸೂಕ್ತವಾಗುವಂತೆ ಅಣಿಗೊಳಿಸುವ ಕೆಲಸ ಮಾಡುತ್ತದೆ ನೋಡಿ: